**ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ನ್ಯಾಯಾಲಯ, ಮದ್ದೂರು.**

**ಸಿಸಿ 749/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ರೋಜಾ | ಚಾ.ಸಾ-1 |
| ಗಂಡನ ಹೆಸರು | - | ಶ್ರೀ ವೆಂಕಟೇಶ್ | ಪ್ರಾ.ಸಾ-1 |
| ವಯಸ್ಸು | - | 27 ವರ್ಷ | |
| ಉದ್ಯೋಗ | - | ಗೃಹಿಣಿ | |
| ವಾಸಸ್ಥಳ | - | ಮುಂಡುಗದೊರೆ | |

ದಿನಾಂಕಃ24-06-2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:ಅಭಿಯೋಜನೆಯ ಪರಃ ಎಪಿಪಿ ಯವರಿಂದ:**

ಚಾ.ಸಾ. 2 ನಮ್ಮ ಯಜಮಾನರ ಮನೆಯ ಪಕ್ಕದವರು ಚಾ.ಸಾ. 3 ನನ್ನ ತಂದೆ, ಚಾ.ಸಾ. 4 ನನ್ನ ತಾಯಿ. ಚಾ.ಸಾ. 5 ರಿಂದ 11 ರವರು ಪರಿಚಯವಿದೆ. ಅವರು ನಮ್ಮ ವಿವಾಹಕ್ಕೆ ಸಾಕ್ಷಿಯಾಗಿದ್ದರು. ಚಾ.ಸಾ. 12 ಮತ್ತು 13 ರವರ ಪರಿಚಯವಿದೆ. 1 ನೇ ಆರೋಪಿ ನನ್ನ ಗಂಡ, 2 ನೇ ಆರೋ ನನ್ನ ಮಾವ, 3 ನೇ ಆರೋಪಿ ನನ್ನ ಅತ್ತೆ, ಆರೋಪಿ 4 ನನ್ನ ನಾದಿನಿ. 5 ನೇ ಆರೋಪಿ ನನ್ನ ನಾದಿನಿಯ ಗಂಡ. ದಿನಾಂಕಃ 02.06.2013 ರಂದು ಶ್ರೀರಂಗಪಟ್ಟಣದ ಐಯಪ್ಪಸ್ವಾಮಿ ಕಲ್ಯಾಣಮಂಟಪದಲ್ಲಿ ನಮ್ಮ ವಿವಾಹವಾಗಿರುತ್ತದೆ. ವಿವಾಹದ ಸಂದರ್ಭದಲ್ಲಿ ಆರೋಪಿತರ ಕಡೆಯಿಂದ 100 ಗ್ರಾಂ ಚಿನ್ನ, 50 ಸಾವಿರ ರೂ. ಹಣವನ್ನು ಕೇಳಿದ್ದರು. ಮಾತುಕತೆಯಾದ ನಂತರ 1 ನೇ ಆರೋಪಿಗ 50 ಸಾವಿರ ರೂ. ನಗದು, 30 ಗ್ರಾಂ ಚಿನ್ನದ ಸರ, 5 ಗ್ರಾಂ ನ ಎರಡು ಜೊತೆ ಉಂಗುರ, ನನಗೆ 40 ಗ್ರಾಂ ಮಾಂಗಲ್ಯದ ಸರ, 15 ಗ್ರಾಂ ಎರಡು ಜೊತೆ ಓಲೆ ಜುಮುಕಿ ಕೊಟ್ಟು ವಿವಾಹ ಮಾಡಿಕೊಟ್ಟಿರುತ್ತಾರೆ. ವಿವಾಹವಾದ ನಂತರ ನಾನು ಮತ್ತು ನನ್ನ ಗಂಡ ನನ್ನ ಗಂಡನ ಮನೆಯಲ್ಲಿದ್ದೆವು. ಮದುವೆಯಾದ ಮೂರು ತಿಂಗಳು ಮಾತ್ರ ಅನ್ಯೋನ್ಯವಾಗಿದ್ದೆವು. ನಂತರ 50 ಸಾವಿರ ರೂ. ಹೆಚ್ಚಿನ ವರದಕ್ಷಿಣೆಯನ್ನು ತರುವಂತೆ ಆರೋಪಿತರು ನನಗೆ

ಕಿರುಕುಳ ನೀಡಿರುತ್ತಾರೆ. ಆರೋಪಿತರೆಲ್ಲರೂ ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಸದರೀ ವಿಚಾರವನ್ನು ನಾನು ನನ್ನ ತಂದೆಗೆ ತಿಳಿಸಿದಾಗ ನನ್ನ ತಂದೆ 50 ಸಾವಿರ ಹಣವನ್ನು ತಂದು ನಮ್ಮ ಅತ್ತೆ ಮಾವಗೆ ನೀಡಿರುತ್ತಾರೆ.

ಅದಾದ ಸ್ವಲ್ಪ ದಿನಗಳ ನಂತರ ನನ್ನನ್ನು ಚೆನ್ನಾಗಿ ನೋಡಿಕೊಂಡಿರುತ್ತಾರೆ. ನಂತರ ಆರೋಪಿತರು ಹೆಚ್ಚಿನ ವರದಕ್ಷಿಣೆ ಬೇಕು ಎಂದು ಅವಾಚ್ಯ ಶಬ್ದಗಳಿಂದ ಬೈದು ಕಿರುಕುಳ ನೀಡಿರುತ್ತಾರೆ. ನಂತರ ನನ್ನ ಮೈಮೇಲೆ ಇದ್ದ ಒಡವೆಗಳನ್ನು ನನ್ನ ಅತ್ತೆ ಮಾವನಿಗೆ ನೀಡಿರುತ್ತೇನೆ. ನಂತರ 1 ನೇ ಆರೋಪಿ ಮದ್ಯಪಾನ ಮಾಡಿಕೊಂಡು ಬಂದು, ನನಗೆ ಜೀವಬೆದರಿಕೆ ಹಾಕಿರುತ್ತಾರೆ. ಸದರೀ ವಿಚಾರವನ್ನು ನಾನು ನಮ್ಮ ತಂದೆಯವರಿಗೆ ತಿಳಿಸಿರುತ್ತೇನೆ. ಆಗ ನಮ್ಮ ತಂದೆ ನಮ್ಮ ಗ್ರಾಮದ ಮುಖಂಡರುಗಳನ್ನು ಕರೆದುಕೊಂಡು ಬಂದು, ಪಂಚಾಯತಿ ಮಾಡಿರುತ್ತಾರೆ. ಪಂಚಾಯತಿಯ ಮಾತಿಗೆ ಆರೋಪಿತರು ನಿರಾಕರಣೆಯನ್ನು ಮಾಡಿರುತ್ತಾರೆ. ನಂತರ ನನ್ನ ಅತ್ತೆ ಮತ್ತು ಮಾವ ನನ್ನ ಮಗನಿಗೆ ಬೇರೆ ಮದುವೆ ಮಾಡುತ್ತೇನೆಂದು, ನನ್ನನ್ನು ಸಾಯಿಸುವಂತೆ ಪ್ರಚೋದನೆ ನೀಡಿರುತ್ತಾರೆ. ನಂತರ ನಾನು ಪೋಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 1 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ. 1(ಎ) ಎಂದು ಗುರುತಿಸಲಾಯಿತು. ನಾನು ದೂರು ನೀಡಿದ ನಂತರ ಪೋಲೀಸರು ನಮ್ಮ ಶಿವಪುರದ ನನ್ನ ಗಂಡನ ಮನೆಗೆ ಬಂದು, ಮಹಜರ್ ಕ್ರಮವನ್ನು ಜರುಗಿಸಿರುತ್ತಾರೆ. ಮಹಜರ್ ನ ಸಂದರ್ಭದಲ್ಲಿ ನಾನು, ಚಾ.ಸಾ. 12 ಮತ್ತು 13 ರವರು ಹಾಜರಿದ್ದು, ನಮ್ಮ ಸಮಕ್ಷಮದಲ್ಲಿ ಮದುವೆಯ ಆಮಂತ್ರಣ ಪತ್ರಿಕೆ, ಮನೆಯ ಛಾಯಾಚಿತ್ರಗಳನ್ನು ತೆಗೆದುಕೊಂಡು ಹೋಗಿರುತ್ತಾರೆ. ಸದರೀ ಅಮಾನತ್ತು ಮಹಜರ್ ಗೆ ನಾನು ಸಾಕ್ಷಿದಾರಳಾಗಿ ಸಹಿ ಮಾಡಿರುತ್ತೇನೆ. ಸದರೀ ಅಮಾನತ್ತು ಮಹಜರ್ ನ್ನು ನಿ.ಪಿ. 2 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ. 2(ಎ) ಎಂದು ಗುರುತಿಸಲಾಯಿತು. ಮದುವೆಯ ಆಮಂತ್ರಣ ಪತ್ರಿಕೆಯ ನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 3 ಎಂದು, ಮದುವೆಯ ಕಲ್ಯಾಣಮಂಟಪದ ರಶೀದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 4 ಎಂದು, ಒಡವೆ ರಶೀದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು

ನಿ.ಪಿ. 5 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಗಳು 2 ರಿಂದ 4 ರವರನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿ 1 ಮತ್ತು 5 ರವರ ಗೈರು ಹಾಜರಿಯನ್ನು ಕೋರಿ ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಆರೋಪಿ 1 ಮತ್ತು 5 ರವರನ್ನು ಗುರುತಿಸಲು ತಕರಾರಿಲ್ಲ ಎಂದು ತಿಳಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಎ ಪಿ ಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ-</u>**

ದಿನಾಂಕಃ 05.11.2019 ರಂದು ರಾತ್ರಿ ಸುಮಾರು 11 ಗಂಟೆ ಸಮಯದಲ್ಲಿ ಆರೋಪಿ 1 ರಿಂದ 5 ರವರು ಇನ್ನೂ ಹೆಚ್ಚಿನ ವರದಕ್ಷಿಣೆ ತೆಗೆದುಕೂಂಡು ಬಾ ಎಂದು ನಿಮ್ಮ ಕತ್ತಿನಲ್ಲಿದ್ದ ಮಾಂಗಲ್ಯದ ಸರವನ್ನು ಕಿತ್ತುಕೊಂಡು ಮನಬಂದಂತೆ ಹೊಡೆದು ಮನೆಯಿಂದ ಹೊರದಬ್ಬಿರುತ್ತಾರೆಂದರೆ ಸರಿ. ದಿನಾಂಕಃ 22.11.2019 ರಂದು ಚಾ.ಸಾ. 5 ರಿಂದ 11 ರವರೆಲ್ಲರೂ ಪಂಚಾಯತಿ ಮಾಡಿದರು, ಆಗ ಆರೋಪಿತರು ನಮಗೆ ಇನ್ನೂ ಹೆಚ್ಚಿನ ವರದಕ್ಷಿಣೆ ನೀಡಿದರೇ ಮಾತ್ರ ಮನೆಗೆ ಸೇರಿಸುತ್ತೇವೆ ಇಲ್ಲದಿದ್ದರೇ ಮನೆಗೆ ಸೇರಿಸುವುದಿಲ್ಲ ಎಂದು ಪಂಚಾಯತಿಯನ್ನು ತಿರಸ್ಕಾರ ಮಾಡಿರುತ್ತಾರೆಂದರೆ ಸರಿ. ಈ ಎಲ್ಲಾ ವಿಚಾರವನ್ನು ನಿಮ್ಮ ದೂರಿನಲ್ಲಿ ನಮೂದು ಮಾಡಿದ್ದೀರಿ ಎಂದರೆ ಸರಿ. ಪೋಲೀಸರು ಮಹಜರ್ ಕ್ರಮ ಜರುಗಿಸಿದಾಗ ನಿ.ಪಿ. 3 ಮತ್ತು 4 ನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿಗಳ ಪರಃ ಶ್ರೀ ಹೆಚ್ ಎಂ ರವರಿಂದಃ</u>**

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಗಂಡ ಪಿಯುಸಿ ತನಕ ವಿದ್ಯಾಭ್ಯಾಸ ಮಾಡಿದ್ದಾರೆ. ಆರೋಪಿ 2 ರವರು ಪಿ ಎಲ್ ಡಿ

ಬ್ಯಾಂಕಿನಲ್ಲಿ ಕೆಲಸದಲ್ಲಿದ್ದರು ಎಂದರೆ ಸರಿ. 4 ಮತ್ತು 5 ನೇ ಆರೋಪಿಗಳು ಗಂಡ ಹೆಂಡತಿ ಎಂದರೆ ಸರಿ. ಆರೋಪಿ 5 ವರು ಬೆಂಗಳೂರಿನಲ್ಲಿ ಬೆಸ್ಕಾಂನಲ್ಲಿ ಕೆಲಸದಲ್ಲಿದ್ದಾರೆಂದರೆ ಸರಿ. ಆರೋಪಿ 4 ಮತ್ತು 5 ರವರು ಬೆಂಗಳೂರಿನಲ್ಲಿ ವಾಸವಿದ್ದಾರೆಂದರೆ ಸರಿ. ಸುಮಾರು 13 ವರ್ಷಗಳಿಂದ ಅವರು ಬೆಂಗಳೂರಿಲ್ಲಿ ವಾಸವಿದ್ದಾರೆಂದರೆ ಸರಿ. ನನ್ನ ತಂದೆ ವ್ಯವಸಾಯ ಮಾಡುತ್ತಾರೆ. ನನ್ನ ತಂದೆಯವರಿಗೆ ಅರ್ಧ ಎಕರೆ ಜಮೀನು ಇದೆ. ನಮ್ಮ ತಂದೆಯವರಿಗೆ ನಾವು ಇಬ್ಬರು ಹೆಣ್ಣುಮಕ್ಕಳು, ಗಂಡು ಮಕ್ಕಳು ಇಲ್ಲ. ನನ್ನ ತಂಗಿಯ ಮದುವೆಯಾಗಿದೆ. ನಮ್ಮ ತಂದೆಯವರು ಅರ್ಧ ಎಕರೆ ಜಮೀನಿನಲ್ಲಿ ಮಾಡುವ ಉತ್ಪತ್ತಿ ನಮ್ಮ ಕುಟುಂಬದ ನಿರ್ವಹಣೆಗೆ ಸಾಕಾಗುತ್ತದೆಯೆಂದರೆ ಸರಿ. ನಿಮ್ಮ ಕುಟುಂಬ ಬಡತನದ ಕುಟುಂಬ ಎಂದರೆ ಸರಿ. ನಮ್ಮ ಮದುವೆಯ ಸಂದರ್ಭದಲ್ಲಿ ಆರೋಪಿ 2 ರವರು ಪಿ ಎಲ್ ಡಿ ಬ್ಯಾಂಕಿನಲ್ಲಿ ಕೆಲಸದಲ್ಲಿದ್ದು, ಅವರಿಗೆ ಸಂಬಳ ಬರುತ್ತಿತ್ತು ಎಂದರೆ ಸರಿ. ನಿಮ್ಮ ಮದುವೆಯ ಸಂದರ್ಭದಲ್ಲಿ ಆರೋಪಿ 1 ರವರು ಕೆ ಎಂ ದೊಡ್ಡಿಯಲ್ಲಿ ಹಾಸ್ಟೆಲ್ ನ ವಾರ್ಡನ್ ಆಗಿ ಹೋಗುತ್ತಿದ್ದರು ಎಂದರೆ ಸರಿ. ನಿಮ್ಮದು ಬಡತನದ ಕುಟುಂಬ ಆದ ಕಾರಣ ನಿಮ್ಮ ಮಾವ ಕೆಲಸದಲ್ಲಿದ್ದ ಕಾರಣ ಅವರೇ ಎಲ್ಲಾ ಹಣವನ್ನು ಒದಗಿಸಿ, ನಿಮ್ಮ ಮದುವೆ ಮಾಡಿದ್ದಾರೆಂದರೆ ಸರಿಯಲ್ಲ.

ಮದುವೆಯ ಸಂದರ್ಭದಲ್ಲಿ 50 ಸಾವಿರ ನಗದು, 5 ಗ್ರಾಂ ಎರಡು ಉಂಗುರಗಳು, 30 ಗ್ರಾಂ ಕತ್ತಿನ ಚೈನು ಮತ್ತು 40 ಗ್ರಾಂ ಚಿನ್ನದ ಸರವನ್ನು ಮದುವೆಯ ಸಂದರ್ಭದಲ್ಲಿ ನಿಡಿರಲಿಲ್ಲ ಎಂದರೆ ಸರಿಯಲ್ಲ. ನಿಮ್ಮ ಗಂಡನಿಗೆ ಮತ್ತು ನಿಮಗೆ ಮದುವೆಯ ಸಂದರ್ಭದಲ್ಲಿ ಹಣ ಮತ್ತು ಚಿನ್ನದ ಒಡವೆಗಳು ನೀಡಿದ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ಇದೆಯೆಂದು ನುಡಿಯುತ್ತಾರೆ. ನಾನು ಒಡವೆ ಚೀಟಿಯನ್ನು ನೀಡಿದ್ದೇನೆಂದು ಉತ್ತರಿಸುತ್ತಾರೆ. ಹಣ ಮತ್ತು ಒಡವೆಯನ್ನು ನೀಡಿದ ಬಗ್ಗೆ ಯಾವುದೇ ಛಾಯಾ ಚಿತ್ರವನ್ನು ತೆಗೆದುಕೊಂಡಿಲ್ಲ. ನೀವು ಈ ಪ್ರಕರಣಕ್ಕಾಗಿ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಮದುವೆಯ ಸಂದರ್ಭದಲ್ಲಿ ನನಗೆ 40 ಗ್ರಾಂ ಮಾಂಗಲ್ಯದ ಸರ, 15 ಗ್ರಾಂ ಓಲೆ ಜುಮುಕಿ ಮತ್ತು 5 ಗ್ರಾಂ ಉಂಗುರವನ್ನು ನೀಡಿರುತ್ತಾರೆ. ಮದುವೆಯ ಸಂದರ್ಭದಲ್ಲಿ 40 ಗ್ರಾಂ ಮಾಂಗಲ್ಯದ ಸರ, 15 ಗ್ರಾಂ ಓಲೆ

ಜುಮುಕಿ, 5 ಗ್ರಾಂ ಉಂಗುರವನ್ನು ಆರೋಪಿ 2 ರವರೇ ನೀಡಿದ್ದಾರೆಂದರೆ, ಸಾಕ್ಷಿ ಅವರೇ ಕೊಟ್ಟು ವಾಪಸ್ಸು ತೆಗೆದುಕೊಂಡಿದ್ದಾರೆಂದು ನುಡಿಯುತ್ತಾರೆ. ಮದುವೆಯ ನಂತರ ನೀವು, ನಿಮ್ಮ ಅತ್ತೆ, ನಿಮ್ಮ ಗಂಡ ಮತ್ತು ಮಾವ ಮದ್ದೂರಿನ ಶಿವಪುರದಲ್ಲಿ ವಾಸವಿದ್ದಿರಿ ಎಂದರೆ ಸರಿ. ನಾವು ವಾಸಿಸುತ್ತಿದ್ದ ಮನೆ ಆರ್ ಸಿ ಸಿ ಮನೆಯಾಗಿದ್ದು, ಎಲ್ಲಾ ಸೌಕರ್ಯ ಇತ್ತು ಎಂದರೆ ಸರಿ.

ಮದುವೆಯಾದ ನಂತರ ನೀವು ನಿಮ್ಮ ಗಂಡನಿಗೆ ನಾನು ಮತ್ತು ನೀವು ಮಾತ್ರ ಮನೆಯಲ್ಲೇ ಇರೋಣ, ನಿಮ್ಮ ತಂದೆ-ತಾಯಿ ಮನೆಯಲ್ಲಿ ಇರುವುದು ಬೇಡ ಎಂದು ಒತ್ತಾಯ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನಿಮ್ಮ ಒತ್ತಾಯಕ್ಕೆ ಬೇಸತ್ತು ಅವರು ಕೆಲಸಕ್ಕೆ ಹೋಗುವುದನ್ನು ಬಿಟ್ಟಿರುತ್ತಾರೆಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು, ನಮ್ಮ ಮದುವೆಯನ್ನು ಸುಳ್ಳು ಹೇಳಿ ಮಾಡಿಸಿಕೊಂಡಿರುತ್ತಾರೆ. ಆರೋಪಿ 1 ರವರು ಬೇರೆ ಕಡೆ ಕೆಲಸಕ್ಕೆ ಹೋಗಬೇಕೆಂದು ಪ್ರತಿನಿತ್ಯ ಒತ್ತಾಯ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಆಗ ಪಂಚಾಯತಿದಾರರು ಪಂಚಾಯತಿಯನ್ನು ಮಾಡಿ, ನೀವು ಮತ್ತು ಆರೋಪಿ 1 ರವರು ಮಾತ್ರ ಮದ್ದೂರಿನಲ್ಲಿ ವಾಸವಿರಬೇಕು, ಆರೋಪಿ 2 ಮತ್ತು 3 ರವರು ಬೇರೆ ಕಡೆ ವಾಸ ಮಾಡಬೇಕೆಂದು ತಿಳಿಸಿದ ಕಾರಣ ಆರೋಪಿ 2 ಮತ್ತು 3 ರವರು ಮಂಡ್ಯದಲ್ಲಿ ವಾಸವಿರುತ್ತಾರೆಂದರೆ ಸರಿಯಲ್ಲ. ಆರೋಪಿ 2 ಮತ್ತು 3 ರವರು ಬೇರೆ ಕಡೆ ವಾಸ ಮಾಡಬೇಕೆಂದು ಪಂಚಾಯತಿಯಲ್ಲಿ ಯಾವುದೇ ನಿರ್ಣಯವಾಗಿರುವುದಿಲ್ಲ, ಆದರೆ ಅವರಾಗಿಯೇ ಮಂಡ್ಯಗೆ ಹೋಗಿ ವಾಸವಾಗಿರುತ್ತಾರೆ. ನಿಮಗೆ ಮನೆಯನ್ನೂ ಕೊಟ್ಟು ನೀವು ಚೆನ್ನಾಗಿರಬೇಕು ಎಂದು ಪ್ರತೀ ತಿಂಗಳು 3 ಸಾವಿರ ಹಣವನ್ನು ನೀಡುತ್ತಿದ್ದರು ಎಂದರೆ ಸಾಕ್ಷಿ 2 ಸಾವಿರ ಮಾತ್ರ ನೀಡುತ್ತಿದ್ದರು ಎಂದು ಉತ್ತರಿಸುತ್ತಾರೆ. ನಾನು ಮತ್ತು ನನ್ನ ಗಂಡ 1 ವರ್ಷ ಮಾತ್ರ ಅನ್ಯೋನ್ಯವಾಗಿದ್ದೆವು. ಆಗಲೂ ಕೂಡ ನನ್ನ ಗಂಡ ಕಿರುಕುಳ ನೀಡುತ್ತಿದ್ದರು. ನೀವು ಶಿವಪುರದಿಂದ ನಿಮ್ಮ ತಂದೆಯ ಮನೆಗೆ ಹೋಗುವ ತನಕ ಆರೋಪಿ 2 ಮತ್ತು 3 ರವರು ಮಂಡ್ಯದಿಂದ ಮದ್ದೂರಿಗೆ ಬಂದಿರುವುದಿಲ್ಲ ಎಂದರೆ ಸರಿ. ಆರೋಪಿ 1 ರವರು ಯಾವ ದಿನಾಂಕ ಮತ್ತು ವರ್ಷ ನಿಮ್ಮನ್ನು ಹೊಡೆದಿರುತ್ತಾರೆಂದರೆ ಸಾಕ್ಷಿ ಪ್ರತೀ ದಿನ ಹೊಡೆಯುತ್ತಿದ್ದರು ಎಂದು ನುಡಿಯುತ್ತಾರೆ. ಆರೋಪಿ 1 ರವರು ಸುಮಾರು 9 ವರ್ಷಗಳಿಂದ ಪ್ರತೀ ದಿನ ನನ್ನನ್ನು ಹೊಡೆದಿರುತ್ತಾರೆ.

ಆರೋಪಿ 1 ರವರು ನನ್ನನ್ನು ಹೊಡೆದಾಗ ನನಗೆ ರಕ್ತ ಗಾಯಗಳಾಗಿತ್ತು. ಆದರೆ ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿಲ್ಲ. ನಾನು ಪೋಲೀಸ್ ಠಾಣೆಗೆ ಹೋಗಿ ದೂರು ನೀಡಿರುವುದಿಲ್ಲ.

ನಮ್ಮ ತಂದೆ ತಾಯಿಗೆ ದೂರವಾಣಿ ಕರೆ ಮಾಡಲು ಆರೋಪಿ ನನ್ನನ್ನು ಬಿಡುತ್ತಿರಲಿಲ್ಲ. ಆರೋಪಿ 1 ರವರು ನಿಮ್ಮನ್ನು ಹೊಡೆದಿರುವ ಬಗ್ಗೆ ಪಕ್ಕದ ಮನೆಯವರು ನೋಡಿದ್ದಾರಾ ಎಂದರೆ ಹೌದು ಎಂದು ಉತ್ತರಿಸುತ್ತಾರೆ. ನಾನು ಪಕ್ಕದ ಮನೆಯವರಿಗೆ ತಿಳಿಸಿ, ನಮ್ಮ ತಂದೆ ತಾಯಿಯವರಿಗೆ ತಿಳಿಸುವಂತೆ ನಾನು ಹೇಳಿರುವುದಿಲ್ಲ. ಸುಮಾರು 20 ಬಾರಿ ಪಂಚಾಯತಿ ಆಗಿರುತ್ತದೆ. 9 ವರ್ಷದಲ್ಲಿ 20 ಪಂಚಾಯತಿಗಳು ಆಗಿರುತ್ತವೆ. 20 ಬಾರಿ ಪಂಚಾಯತಿಗಳು ನಡೆದಾಗ ನಿಮ್ಮ ತಂದೆ ತಾಯಿಯವರು ಬಂದಿದ್ದರಾ ಎಂದರೆ ಹೌದು ಎಂದು ನುಡಿಯುತ್ತಾರೆ. ನಮ್ಮ ತಂದೆ ತಾಯಿ ನನ್ನನ್ನು ನೋಡಲು ಮೂರು ತಿಂಗಳಿಗೊಮ್ಮೆ ಬರುತ್ತಿದ್ದರು. ಆ ಸಮಯದಲ್ಲಿ ಆರೋಪಿ ನನ್ನನ್ನು ಹೊಡೆದು ರಕ್ತ ಗಾಯ ಮಾಡಿರುವ ಬಗ್ಗೆ ನಮ್ಮ ತಂದೆ ತಾಯಿಗೆ ತಿಳಿಸಿರುತ್ತೇನೆ. ಆದರೆ, ಆ ಸಮಯದಲ್ಲಿ ನಮ್ಮ ತಂದೆ ತಾಯಿಗೆ ದೂರನ್ನು ನೀಡಿ ಎಂದು ತಿಳಿಸಿರುವುದಿಲ್ಲ. ನಮ್ಮ ತಂದೆ ತಾಯಿ ಕೂಡ ದೂರನ್ನು ಕೊಡಲು ನಾನು ಅವಕಾಶ ನೀಡಿರುವುದಿಲ್ಲ. ದಿನಾಂಕಃ 05.11.2019 ರಂದು ರಾತ್ರಿ ಸುಮಾರು 11 ಗಂಟೆಯ ಸಮಯದಲ್ಲಿ ಆರೋಪಿತರು ನನ್ನ ಮೇಲೆ ಗಲಾಟೆ ಮಾಡಿರುವುದನ್ನು ನೋಡಿರುತ್ತಾರೆ. ಸದರೀ ಗಲಾಟೆಯನ್ನು ವೆಂಕಟೇಶ್ ಎಂಬುವವರು ನೋಡಿರುತ್ತಾರೆ. ಅದೇ ದಿನ ಪೋಲೀಸ್ ರಿಗೆ ದೂರು ನೀಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ರಾತ್ರಿಯೇ ಪೋಲೀಸರು ಮನೆಗೆ ಬಂದಿದ್ದರು ಎಂದು ನುಡಿಯುತ್ತಾರೆ. ಬೆಳಗ್ಗೆ ಬಂದು ದೂರು ನೀಡುವಂತೆ ಪೋಲೀಸರು ನನಗೆ ತಿಳಿಸಿರುತ್ತಾರೆ. ಬೆಳಗ್ಗೆ 07.00-07.15 ಗಂಟೆಗೆ ಪೋಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇವೆ. ದೂರನ್ನು ಮದ್ದೂರಿನಲ್ಲಿಯೇ ಟೈಪ್ ಮಾಡಿಸಿರುತ್ತೇವೆ. ದೂರನ್ನು ಬೆರಳಚ್ಚು ಮಾಡಿಸಿದಾಗ ನಾನು ಒಬ್ಬಳೇ ಇರುತ್ತೇನೆ. ಆರೋಪಿ 1 ರವರು ಪ್ರತೀ ದಿನ ಮದ್ಯಪಾನ ಮಾಡಿಕೊಂಡು ಬಂದು ನನ್ನನ್ನು ಹೊಡೆದಿರುವ ಬಗ್ಗೆ ದೂರಿನಲ್ಲಿ ನಮೂದು ಮಾಡಿರುತ್ತೇನೆ. ನಾವು ದೂರು ನೀಡಿದ ನಂತರ ಪೋಲೀಸರು ಅದನ್ನು ದಾಖಲು ಮಾಡಿಕೊಂಡಿರುತ್ತಾರೆ.

ರಾತ್ರಿಯೇ ಪೋಲೀಸ್ ಪೇದೆಯವರು ಬಂದು ಬೆಳಗ್ಗೆ ಬಂದು ದೂರು ನೀಡುವಂತೆ ನನಗೆ ತಿಳಿಸಿರುತ್ತಾರೆ. ದೂರು ನೀಡಿದ ದಿನವೇ ಪೋಲೀಸರು ಮಹಜರ್ ಕ್ರಮ ಜರುಗಿಸಲು ಬಂದಿರುತ್ತಾರೆ. ಅರುಣ್ ಮತ್ತು ಅನಿಲ್ ರವರನ್ನು ಪೋಲೀಸರೇ ಪಂಚರನ್ನಾಗಿ ಕರೆದುಕೊಂಡು ಬಂದಿರುತ್ತಾರೆ.

ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

1 ನೇ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ